development of Kannada. I want to know when did I do it? And I want to know when I spoke to him, where and at what time?

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಅಜೀಜ್ ಸೇಠ್‌ರವರು ಈ ಕನ್ನಡ ನಾಡಿನ ಭಾಷೆಯ ಬಗ್ಗೆ, ಕನ್ನಡ ಆಡಳಿತ ಭಾಷೆ ಆಗಬೇಕೆನ್ನುವ ಕಳಕಳಿಯ ಬಗ್ಗೆ ಇವತ್ತು ಈ ಸದನದಲ್ಲಿ ಕೆಲವು ಮಾತುಗಳನ್ನು ಆಡಿದ್ದಾರೆ. ನಾನಾದರೂ ಕೂಡ ಇದರ ಬಗ್ಗೆ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಇಲ್ಲಿ ಹಲವಾರು ಸದಸ್ಯರುಗಳು ಹಾಜರು ಇರಬೇಕಾಗುತ್ತದೆ. ಶ್ರೀಮಾನ್ ವಾಟಾಳ್ ನಾಗರಾಜರವರು ಕನ್ನಡ ಚಳುವಳಿಗಾಗಿ ದುಡಿದಂಥವರೂ ಕೂಡ ಇಂಥ ಚರ್ಚೆಯಲ್ಲಿ ಭಾಗವಹಿಸಬೇಕಾಗುತ್ತದೆ. ಆದುದರಿಂದ ತಾವು ಒಂದು ಸಮಯವನ್ನು ನಿಗದಿ ಮಾಡಬೇಕಾಗಿದೆ. ಯಾರು, ಯಾವ ಕಾರಣಕ್ಕಾಗಿ ಹೇಗೆ ಕನ್ನಡಕ್ಕೆ ಅಡ್ಡಿಯಾಗಿದ್ದಾರೆ ಎನ್ನತಕ್ಕ ವಾಸ್ತವಾಂಶ ಈ ನಾಡಿನ ನಾಲ್ಕೂವರೆ ಕೋಟಿ ಕನ್ನಡ ಜನರಿಗೆ ಅರ್ಥವಾಗಲೇಬೇಕು. ಈ ಸದನದಲ್ಲಿ 1965ನೇ ಇಸವಿಯಿಂದಲೂ ಪ್ರತಿನಿಧಿಯಾಗಿ, ಕನ್ನಡ ಕುಲಕೋಟಿಯ ಸಚಿವನಾಗಿ ಇದ್ದು, ಕನ್ನಡ ಓದಲು ಬಾರದಂಥ ಸದಸ್ಯರು ಇದ್ದಾರೆ ಎನ್ನತಕ್ಕದ್ದು ಅವಮಾನಕರ ಎಂದು ಹೇಳುತ್ತಿದ್ದೇನೆ. ಆದುದರಿಂದ ಇದಕ್ಕೆ ನಾನು ಸದನದಲ್ಲಿ ಅಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತೇನೆ. ತಾವು ಇದರ ಚರ್ಚೆಗೆ ಸಮಯವನ್ನು ನಿಗದಿ ಮಾಡಿ, ಯಾರ್ಯಾರು ಕನ್ನಡ ಭಾಷೆಯ ಅನುಷ್ಠಾನಕ್ಕೆ ಅಡ್ಡಿಯಾಗಿದ್ದಾರೆ ಎಂಬ ಬಗ್ಗೆ ಆಮೂಲಾಗ್ರವಾಗಿ ಚರ್ಚೆಯಾಗಿ ಅದು ಈ ನಾಡಿನ ಜನತೆಗೆ ಗೊತ್ತಾಗಬೇಕೆಂದು ನನ್ನ ಪ್ರಾರ್ಥನೆ.

ಶ್ರೀ ಅಜೀಜ್ ಸೇಠ್ : ಇನ್ನೊಮ್ಮೆ ಅವರು ಅದನ್ನೇ ರಿಪೀಟ್ ಮಾಡಿದ್ದಾರೆ. ನಾನು ಕನ್ನಡಕ್ಕೆ ಅಡ್ಡಿಯಾಗಿದ್ದೇನೆ ಎನ್ನತಕ್ಕದ್ದನ್ನು ಹೇಳಿದ್ದಾರೆ. I thought he is my friend and he will come out with a clear and honest statement. If this is so, I am going to move a Privilage Motion against Mr.Vishwanath.

<u>ಪ್ರಕಟಣೆ</u>

ಅಧ್ಯಕ್ಷರು : ಮೊಕದ್ದಮೆಯಲ್ಲಿ ಆರೋಪಿಯಾಗಿ ಕೇಂದ್ರ ಕಾರಾಗೃಹ, ಬೆಂಗಳೂರಿನಲ್ಲಿರುವ ವಿಧಾನ ಸಭಾ ಸದಸ್ಯರಾದ ಶ್ರೀ ಎಲ್. ಆರ್. ಶಿವರಾಮೇಗೌಡರವರ ನ್ಯಾಯಾಂಗ ಬಂಧನದ ಅವಧಿಯನ್ನು ದಿನಾಂಕ : 6-3-1993 ರವರೆಗೆ ವಿಸ್ತರಿಸಲಾಗಿದೆಂದು ನಾಗಮಂಗಲ ಮುನ್ಸೀಫ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರಿಂದ ಸಂದೇಶ ಬಂದಿರುತ್ತದೆ.

ಈಗ ಸಭೆಯನ್ನು ಸೋಮವಾರ ಬೆಳಿಗ್ಗೆ 10.00 ಗಂಟೆಯವರೆಗೆ ಮುಂದೂಡಲಾಗಿದೆ.
(ಸದನವು ಮದ್ಯಾಹ್ನ 1 ಗಂಟೆ 56 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ : 8ನೇ ಮಾರ್ಚ್ ಮಾಹೆ 1993ರ ಸೋಮವಾರದಂದು ಬೆಳಿಗ್ಗೆ 10-00 ಗಂಟೆಗೆ ಸೇರಲು ನಿಶ್ಚಯಿಸಿತು.)

(× ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)